ಶಿವಮೊಗ್ಗ ಡಿಸ್ಟ್ರಿಕ್ಟ್.

ಅಬ್‌ಸ್ಟ್ರಾಕ್ಟ್ ನೋಟಿಫಿಕೇರ್ಷ, ತಾರೀಖು 24ನೆ ಜುಲೈ 1907.

ಚನ್ನಗಿರಿ ತಾಲ್ಲೂಕು ಸೂಳಿಕೆರೆ ಗ್ರಾಮದಲ್ಲಿ ಇರುವ ವೆ|| ಕೆ. ಶ್ಯಾಮೈಯ್ಯಂಗಾರ್ರಿಂದ ಸರಕಾರಕ್ಕೆ ಬರಬೇಕಾದ ಮೊಬಲಗು ಬಾರದೇ ಇರುವದರಿಂದ ಸದರಿಯವರ ಬಾಬತು ಜವಿನಾನುಗಳು ಸ್ಯ 1907ನೆ ಇಸವಿ ಆಗಸ್ಟು 1ನೆ ತಾರೀಖು ಮೈಸೂರು ಗೆಜೆಟಿನ 11ನೆ ಭಾಗದ 363, 364ನೆ ಸಂಪುಟದಲ್ಲಿ ಫಾಯಿಷ್ ಆಗಿರುವ ಡೀಟೇಲ್ಡ್ ನೋಟಿಫಿಕೇರ್ಷನಲ್ಲಿ ನಮೂದಿಸಿ ಇರುವ ತಪಶೀಲ್ ಮೇರೆ ಇರುವವುಗಳನ್ನು 14—9—1907ನೆ ದಿವಿ 11 ಘಂಟೆಗೆ ಸೂಳಿಕೆರೆ ಮೊಕ್ತಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆ.

ಎ. ವೇದಾಂತದೇಸಿಗಂ ಐಯ್ಯಂಗಾರ್,
ಥರ್ ಡೆಪ್ಯೂಟಿ ಕಮಿಷನರ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1907—08ನೆ ಮಿ|| ಅರ್ಜೀ ನಂಬರ್ 40.

ಬೆಂಗಳೂರು ತಾಲ್ಲೂಕು ಎಲಹಂಕದಲ್ಲಿದ್ದು ಮೃತಪಟ್ಟ ಕರಗಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ನಂಜಪ್ಪ, 2ನೆ ಪುಟ್ಟಪ್ಪ, ಮೈನರ್ ಗಾರ್ಡಿಯರ್ ದೊಡ್ಡ ತಂದೆ ಸಂಜೀವಪ್ಪ ಮೃತಪಟ್ಟ ಸದರೀ ಕರಗಪ್ಪನಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಎಲಹಂಕದ ಸ್ಥಳದ ನಂಜಪ್ಪ ಮತ್ತು ಪುಟ್ಟಪ್ಪನು ಡಿಟೋ ವಾಸಸ್ಥರಾಗಿ ಮೃತಪಟ್ಟ ಕರಗಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 497—13—6 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ನಂಜಪ್ಪ ಮತ್ತು ಪುಟ್ಟಪ್ಪನವರ ಅರ್ಜಿಯನ್ನು ಸ್ಯ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾರೀಖು ಶುಕ್ರವಾರದಲ್ಲೂ ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರಗಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1907—08ನೆ ಇಸವಿ ಮಿ|| ಅರ್ಜೀ ನಂಬರ್ 71.

ಮೃತಪಟ್ಟ ದೊಡ್ಡ ಬಳ್ಳಾಪುರದ ವಾಸುದೇವಶಾಸ್ತ್ರಿಗಳ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಸಿದ್ದಿಕಟ್ಟೆಲಿರುವ 1ನೆ ಸುಬ್ರಹ್ಮಣ್ಯಶಾಸ್ತ್ರಿ, 2ನೆ ಶೇಷಶಾಸ್ತ್ರಿ, ಮೃತಪಟ್ಟ ಸದರೀ ದೊಡ್ಡಬಳ್ಳಾಪುರದ ವಾಸುದೇವಶಾಸ್ತ್ರಿಗಳಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ 1ನೆ ಸುಬ್ರಹ್ಮಣ್ಯಶಾಸ್ತ್ರಿ, 2ನೆ ಶೇಷಶಾಸ್ತ್ರಿ ಎಂಬವರು ಡಿಟೋ ವಾಸಸ್ಥರಾಗಿ ಮೃತಪಟ್ಟ ದೊಡ್ಡಬಳ್ಳಾಪುರದ ವಾಸುದೇವಶಾಸ್ತ್ರಿಗಳ ಜಿಂದಗಿ ಬಗ್ಯಾಗಿ ಬರತಕ್ಕ 3,500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಜಾಸ್ತುದಾರರಾದ ಸುಬ್ರಹ್ಮಣ್ಯಶಾಸ್ತ್ರಿ ಮತ್ತು ಶೇಷಶಾಸ್ತ್ರಿಗಳ ಅರ್ಜಿಯನ್ನು ಸ್ಯ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಾಸುದೇವಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1907—08ನೆ ಇಸವಿ ಮಿ|| ಅರ್ಜೀ ನಂಬರ್ 79.

ಬೆಂಗಳೂರು ಕೀಗೇಬೇಲಿಯಲ್ಲಿ ವಾಸವಾಗಿದ್ದು ಮೃತಪಟ್ಟ ಮಂಡಿದಾರ್ ಎಲ್. ಸೆಟ್ಟ್ವಾಜೀರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ವೆಂಕಟರಾವ್ ಉರಫ್ ಬಾಪೂರಾವ್, 2 ವಾಸುದೇವರಾವ್, ಮೈನರ್ ಗಾರ್ಡಿಯರ್ ವೆಂಕಟರಾವ್ ಉರಫ್ ಬಾಪೂರಾವ್ ಮೃತಪಟ್ಟ ಸದರೀ ಸೆಟ್ಟ್ವಾಜೀರಾಯರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವೆಂಕಟರಾವ್ ಉರಫ್ ಬಾಪೂರಾವ್ ಮತ್ತು ವಾಸುದೇವರಾವ್ ಎಂಬುವರು ಡಿಟೋ ವಾಸಸ್ಥರಾಗಿ ಮೃತಪಟ್ಟ ಸೆಟ್ಟ್ವಾಜೀ ರಾಯರ ಜಿಂದಗಿ ಬಗ್ಯಾಗಿ ಬರತಕ್ಕ 660 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ವೆಂಕಟರಾವ್ ಉರಫ್ ಬಾಪೂರಾವ್ ಮತ್ತು ವಾಸುದೇವರಾಯರ ಅರ್ಜಿಯನ್ನು ಸ್ಯ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೆಟ್ಟ್ವಾಜೀರಾಯರ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ॥ 1906—07ನೆ ಇಸವಿ ಮಿ॥ ಅರ್ಜಿ ನಂಬರ್ 752.

ಬೆಂಗಳೂರು ಸಿಟಿ ಸಬ್ ರಿಜಿಸ್ಟ್ರಾರ್ರ ಆಫೀಸಿನಲ್ಲಿ ಕ್ಲಾರ್ಕ್ ಆಗಿದ್ದ ಮೃತಪಟ್ಟ ಶಾಮರಾಯರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ಹಾಲಿ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ರಾವೋಹಳ್ಳಿಲಿ ವಾಸವಾಗಿರುವ ರಾಘವೇಂದ್ರಪ್ಪನವರ ಮಗಳು ರಂಗವ್ಮ, ಮೃತಪಟ್ಟ ಸದರೀ ಶಾಮರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ರಾವೋಹಳ್ಳಿ ಸ್ಥಳದ ರಂಗನ್ಮ ಎಂಬುವರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಶಾಮರಾಯರ ಜಿಂದಗಿ ಬಗ್ಯಾಗಿ ಬರತಕ್ಕ 350 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ, ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ರಂಗವ್ಮನವರ ಅರ್ಜಿಯನ್ನು ಸ॥ 1907ನೆ ಇಸವಿ ಆಗಸ್ಟ್ ತಿಂಗಳು 16ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಶಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1907ನೆ ಇಸವಿ ಆಗಸ್ಟ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ॥ 1906—07ನೆ ಇಸವಿ ಮಿ॥ ಅರ್ಜೀ ನಂಬರ್ 756.

ಮಾಗಡಿ ತಾಲ್ಲೂಕು ಕುದೂರು ಹೋಬಳಿ ಕಿಡ್ಲಿಪುರದ ವಾಸಸ್ಥರಾಗಿಯೂ ಮತ್ತು ದಾವಣಗೆರೆಲಿ ನೌಕರಿಲಿದ್ದು ಮೃತಪಟ್ಟ ತಿರುಮಲಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1. ಕೃಷ್ಣಮಾಚಾರ್ರು, 2. ರಘುನಾಥಾಚಾರ್ರು, ಇವರುಗಳು ಮೈನರ್, ಇವರ ಗಾರ್ಡಿಯರ್ಷಿ ತಾಯಿ ಲಕ್ಷ್ಮಿದೇವಮ್ಮ ಉರಫ್ ಪೆರಂದೇವಮ್ಮ, ಮೃತಪಟ್ಟ ಸದರೀ ತಿರುಮಲಾಚಾರ್ರಿಗೆ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡಿ ತಾಲ್ಲೂಕು ಕಿಡ್ಲೀಪುರ ಸ್ಥಳದ ಕೃಷ್ಣಮಾಚಾರ್ರು ಮತ್ತು ರಘುನಾಥಾಚಾರ್ರು ಇವರ ಗಾರ್ಡಿಯರ್ಷಿ ಲಕ್ಷ್ಮಿದೇವಮ್ಮ ಉರಫ್ ಪೆರಂದೇವಮ್ಮನ್ನು ದಾವಣಗೆರೆ ವಾಸಸ್ಥರಾಗಿ ಮೃತಪಟ್ಟ ತಿರುಮಲಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣಮಾಚಾರ್ರು ಮತ್ತು ರಘುನಾಥಾಚಾರ್ರು ಮೈನರ್, ಗಾರ್ಡಿಯರ್ಷಿ ಪೆರಂದೇವಮ್ಮನ ಅರ್ಜಿಯನ್ನು ಸ॥ 1907ನೆ ಇಸವಿ ಆಗಸ್ಟ್ ತಿಂಗಳು 16ನೆ ತಾ॥ ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುಮಲಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1907ನೆ ಇಸವಿ ಆಗಸ್ಟ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ॥ 1906—07ನೆ ಇಸವಿ ಮಿ॥ ಅರ್ಜೀ ನಂಬರ್ 760.

ಬೆಂಗಳೂರು ಶಿದ್ದಿಕಟ್ಟೆಲಿದ್ದು ಮೃತಪಟ್ಟ ಮದ್ದಗಿರಿ ಶೀನಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಸಿದ್ದಿಕಟ್ಟೆ 1ನೆ ಬೀದಿಲಿರುವ ಲಕ್ಷ್ಮಮ್ಮ, ಮೃತಪಟ್ಟ ಸದರೀ ಮದ್ದಗಿರಿ ಶೀನಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಲಕ್ಷ್ಮಮ್ಮ ಎಂಬುವರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಮದ್ದಗಿರಿ ಶೀನಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಮ್ಮನವರ ಅರ್ಜಿಯನ್ನು ಸ॥ 1907ನೆ ಇಸವಿ ಆಗಸ್ಟ್ ತಿಂಗಳು 16ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮದ್ದಗಿರಿ ಶೀನಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1907ನೆ ಇಸವಿ ಆಗಸ್ಟ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಹೆಚ್. ಭಾಭಾ,
ಸಬಾರ್ಡಿನೇಟ್ ಜಡ್ಜ್.

ಪ್ರಸಿದ್ಧ ಪತ್ರಿಕೆ.

ಮೈಸೂರು ಡಿಸ್ಟ್ರಿಕ್ಟ್ಟು ಕೃಷ್ಣರಾಜಪೇಟೆ ತಾಲ್ಲೂಕು ಕಿಕ್ಕೇರಿಯಲ್ಲಿದ್ದು ಮೃತಪಟ್ಟ ವೈಶ್ಯರ ವೆಂಕಟರಮಣ ಕೆಟ್ಟರ ಮಗ ಅಣ್ಣಯ್ಯಕೆಟ್ಟ ಎಂಬುವನು ತನ್ನ ಹೆಂಡತಿಯಾದ ಮೈನರ್ ರಂಗಲಕ್ಷ್ಮಮ್ಮ ಎಂಬುವಳನ್ನ ಮಾತ್ರಾ ಬಿಟ್ಟು ಪಾತೀಯಾದನು. ಅತನ ಸೋದರಳಿಯ ಡಿಟೋ ಕಿಕ್ಕೇರಿ ಗ್ರಾಮದ ವೈಶ್ಯರ ಲಕ್ಷ್ಮಿಯ್ಯಕೆಟ್ಟರ ಮಗ ಸುಬ್ಬಕೆಟ್ಟಯ್ಯು ಪಾತೀಯವನು ಬರದುಕೊ